ಉತ್ತರ—(ಅ) ಈ ರಸ್ತೆಯ ಸರಿಯಾದ ಹೆಸರು ''ಕಲ್ಲೀನಹಳ್ಳಿ ಕಾರೆಕೆರೆ ರಸ್ತೆ'' ಪಿ.ಡಬ್ಲ್ಯೂ.ಡಿ. ಇಲಾಖೆಗೆ ತೆಗೆದುಕೊಳ್ಳಲಾಗಿದೆ.

(ಆ) ಈ ರಸ್ತೆಯ ಒಟ್ಟು ಉದ್ದ ೪ ಮೈಲಿ ೬ ಫರ್ಲಾಂಗ್‌ನಲ್ಲಿ, ೪ ಮೈಲಿ ರಸ್ತೆ ರಚನೆಯಾಗಿದೆ, ಉಳಿದ ೬ ಫರ್ಲಾಂಗ್ ಗಾಡಿ ರಸ್ತೆಯಾಗಿರುತ್ತದೆ. ಈ ರಸ್ತೆ ಗಾಡಿ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.

'ಅ' ಮತ್ತು 'ಆ' ಭಾಗಕ್ಕೆ ಉತ್ತರಗಳು ಈ ರೀತಿ ಸರಿಪಡಿಸಬೇಕೆಂದು ನನ್ನ ವಿನಂತಿ. —

(ಅ) ಈ ರಸ್ತೆಯ ಸರಿಯಾದ ಹೆಸರು ಕಲ್ಲೀನಹಳ್ಳಿ ಕಾರೆ–ಕೆರೆ ರಸ್ತೆಯಾಗಿದ್ದು, ಲೋಕೋಪಯೋಗಿ ಇಲಾಖೆಯವರು ಈ ರಸ್ತೆಯನ್ನು ವಹಿಸಿಕೊಂಡಿದ್ದಾರೆ. ಹಾಗೂ ಭೂ ಸೇನೆಯವರು ಹಾಸನ ತಾಲೂಕಿನಲ್ಲಿ ಕೆಲವು ಭಾಗದ ಈ ರಸ್ತೆಯ ಕಾಮಗಾರಿಯನ್ನು ಪೂರೈಸಿದ್ದಾರೆ.

(ಆ) ಹಾಸನ ತಾಲೂಕಿನಲ್ಲಿರುವ ಈ ರಸ್ತೆಯ ಒಟ್ಟು ಉದ್ದವು ೪ ಮೈಲಿ ೬ ಫರ್ಲಾಂಗ್ ಆಗಿದ್ದು, ಆ ಪೈಕಿ ೪ ಮೈಲಿ ರಸ್ತೆ ರಚನೆಯಾಗಿದ್ದು, ಉಳಿದ ೬ ಫರ್ಲಾಂಗ್ ಗಾಡಿ ರಸ್ತೆಯಾಗಿರುತ್ತದೆ: ಈ ರಸ್ತೆ ಗಾಡಿ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಬಿ. ಎಂ. ರೋಡ್ ಕಾರೆಕೆರೆಯಿಂದ ನಾಲ್ಕು ಮೈಲಿ ಆರು ಫರ್ಲಾಂಗ್ ಇರುತ್ತದೆ. ನಾಲ್ಕು ಮೈಲಿ ರಸ್ತೆಯಾಗಿರುತ್ತದೆ ಚನ್ನಪಟ್ಟಣದಿಂದ ೮ ಮೈಲಿಯಾಗಿರುತ್ತದೆ. ಒಂದು ಲಕ್ಷ ರೂಪಾಯಿ, ಮೇಲ್ಪಟ್ಟು ಖರ್ಚು ಮಾಡಿ ರೋಡ್ ಕೂಡ ತಗಿದೆ. ಮಧ್ಯಗ್ಯಾಪ್ ಬಿಟ್ಟಿರುವುದು ಮುಕ್ಕಾಲು ಮೈಲಿಯೋ, ಒಂದು ಮೈಲಿಯೋ ಆಗಬಹುದು. ಆ ಕಡೆ ಆರು ಫರ್ಲಾಂಗ್ ಈ ಕಡೆ ಮೂರು ಫರ್ಲಾಂಗ್ ಉಳಿಯಬಹುದು. ಚನ್ನರಾಯಪಟ್ಟಣದಿಂದ ಬಸ್ ಆನೇಕೆರೆ ತನಕ ಬಂದು ಹೋಗುತ್ತದೆ. ಈ ರಸ್ತೆ ರಿಪೇರಿಯಾಗುವುದರಿಂದ ಸುಮಾರು ೪೦, ೫೦ ಹಳ್ಳಿಗಳಿಗೆ ಅನುಕೂಲವಾಗುತ್ತದೆ. ಈ ವಿಧ್ಯೆ ಇರುವ ಗ್ಯಾಪನ್ನು ಅನೇಕ ಸಾರಿ ರಿಪೇರಿ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಈಗಲೂ ಬೇಗನೆ ಮಾಡಿಸಿಕೊಡಿ ಎಂದು ಕೇಳಿಕೊಳ್ಳುತ್ತೇನೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿಸಿಕೊಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಲ್ಯಾಂಡ್ ಆರ್ಮಿಯಿಂದ ವಾರ್ಷಿಕ ರಿಪೇರಿ ಕೆಲಸಗಳು ಸರಿಯಾಗಿ ಆಗುತ್ತಾ ಇಲ್ಲ, ಮಧ್ಯೆ ಮಧ್ಯೆ ತೊಂದರೆಯಾಗುತ್ತಿದೆ.

SRI H. M. CHANNABASAPPA.—It has been taken over by the P.W.D. Government is aware of the fact that there is gap between two portions which have been repaired and bus goes upto certain point and does not proceed further. We will attend to it.

ಶ್ರೀ ಎಂ. ಮಲ್ಲಪ್ಪ —ದೇಶಾದ್ಯಂತ ಭೂಸೇನೆಯವರಿಗೆ ಕೆಲಸ ವಹಿಸಿರುವುದು ಸರಿಯಷ್ಟೆ. ಆವರು ಬಹುಮಟ್ಟಿಗೆ ಪೂರ್ತಿಯಾಗಿ. ಕಾರಣವಾಂತರಗಳಿಂದ ಯಾವ ಕೆಲಸವನ್ನೂ ಮಾಡಿಲ್ಲ. ಕೆಲಸವನ್ನೂ ಆವರಿಗೆ ವಹಿಸುವುದು ತಪ್ಪಿಸಿ, ದುರ್ವ್ಯಯವಾಗುತ್ತಿರುವ ಹಣವನ್ನು ಸದ್ವಿನಿಯೋಗ ಮಾಡಲಂ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಪ್ರಶ್ನೆ ಸರ್ಕಾರಕ್ಕೆ ನೇರವಾಗಿ ಸಂಬಂಧಪಟ್ಟಿಲ್ಲ. ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಲ್ಯಾಂಡ್ ಆರ್ಮಿಗೆ ಯಾವುದು ಕೊಟ್ಟಿದ್ದೇವೆ. ಯಾವ ಯಾವುದು ಕೆಟ್ಟು ಹೋಗಿದೆ ಯಾವುದು ಸರಿಮಾಡಿದ್ದಾರೆ ಬಗ್ಗೆ ಪ್ರತ್ಯೇಕವಾಗಿ ಉತ್ತರ ಕೊಡುತ್ತೇನೆ.

Allotment of sites by Corporation of Bangaore City

95. SRI T. R. SHAMANNA (Fort).—Will the Minister for Law and Municipal Administration be pleased to state :—

(*a*) the number of sites given by the Corporation of Bangalore on lease or sale yearwar from 1971 to 1974 end and the extent of land given on lease or sale after the Administrator took charge of the Administration of the Corporation ;

(*b*) the names of parties and organisations to whom such lands have been given on lease or sale ;

(*c*) the condition under which they are given and the rates charged as lease amount or sale price ?

SRI D. K. NAIKAR (Minister for Law and Municipal Administration)—

(*a*) Information furnished in the list 'A' and 'B' placed on the Table of the House. **

'A'			'B'		
No. of Sites sold ;			No. of Sites leased :		
During 1971 to 1974	...	243	During 1971 to 1974	...	570
During the rigime of Administratar	...	54	During the regime of Administrator	..	430
Total	...	297			1,000

(*b*) Information furnished in the list placed on the Table of the House.

(*c*) The lease amount or the sale amount in each case of the cases have been mentioned in the list placed on the Table of the Houses Conditions of lease vary from one category to another of lease General conditions under which lease are made by the Corporation are as follows :—

(1) Specifying lease period ;

(2) Payment of advance lease amount and deposit amount ;

(3) Purpose for which the leased land or building to be used ;

(4) Restricting the alienation of leased properties ;

(5) Restricting putting up of construction on leased lands without prior permission of the Corporation ;

(6) Making liable the lessees for all damages done to the leased properties during the currency of lease period as all the liabilities on them for breach of the leased conditions.

ಶ್ರೀ ಟಿ. ಆರ್. ಶಾಮಣ್ಣ.—ನನಗೆ ಒಂದು ದೊಡ್ಡ ಪಟ್ಟಿಯನ್ನು ಈಗತಾನೆ ಕೊಟ್ಟಿದ್ದೀರಿ. ಇದರಲ್ಲಿ ಅನೇಕ ಬಡಜನರಿಗೆ ಕೊಟ್ಟಿರತಕ್ಕಂಥ ಸೈಟುಗಳ ವಿವರ ಇದೆ. ಇದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಕೆಲವು ಸಂದರ್ಭಗಳಲ್ಲಿ ಸುಮಾರು ೧೦-೧೫ ಲಕ್ಷ ರೂಪಾಯಿಗಳನ್ನು ಕೊಟ್ಟು ಅಕ್ಷೆ ಲರ್ ಮಾಡಿಕೊಂಡು ಕೇವಲ ನಾಮಕಾವಸ್ತೆ ಬೆಲೆಯಲ್ಲಿ ಕೆಲವು ಜಮೀನುಗಳನ್ನು ಬಡವರಿಗೆ ಕೊಟ್ಟಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ ?

** Copies placed in the Karnataka Legislature Library *vide* Number 7 dated 9th February 1976.

† ಶ್ರೀ ಡಿ. ಕೆ. ನಾಯ್ಕರ್.—ಸ್ವಾಮಿ, ಹೆಚ್ಚಾದ ಮಟ್ಟಿಗೂ ಬಡವರ ಜಮೀನುಗಳನ್ನು ಅಕ್ವೈರ್ ಮಾಡಿ ಇನ್ನೊಬ್ಬರಿಗೆ ಫಾಯಿದೆ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಾ ಇಲ್ಲ. ನಾವು ಲಿಸ್‌ನಲ್ಲಿ ಕೊಟ್ಟಿರುವ ಹಾಗೆ ಮಾನ್ಯ ಸದಸ್ಯರೂ ಒಪ್ಪುತ್ತಾರೆ. ಬಡವರಿಗೆ ಅದರಲ್ಲೂ ಸಮ್‌ಕ್ಲಿಯರ್ಸ್‌ನಲ್ಲಿ ಇರತಕ್ಕಂಥ ಜನರಿಗೆ ಹೆಚ್ಚಾಗಿ ಸೈಟುಗಳನ್ನು ಮಾಡಿ ರೋಡ್‌ನಲ್ಲಾಗಲೀ ಮಂನಿವೆಂಕಟಪ್ಪ ಗಾರ್ಡನ್‌ನಲ್ಲಾಗಲೀ ಈಗಾಗಲೇ ೧೨೧೧ ಸೈಟುಗಳನ್ನು ಕೊಡುವಂಥ ಯೋಚನೆ ಮಾಡುತ್ತಿದ್ದೇವೆ. ಇಂತಹ ಲಾಭದಾಯಕವಾಗಿ ಆಗುವ ಕಡೆಗೆ ಹೆಚ್ಚು ಗಮನ ಕೊಟ್ಟಿದ್ದೇವೆ

ಶ್ರೀ ಟಿ. ಆರ್ ಶಾಮಣ್ಣ —ಮಾನ್ಯ ಮಂತ್ರಿಯವರು ಬಡವರಿಗೆ ಹೆಚ್ಚಾಗಿ ಸೈಟುಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಅದರ ಬಗ್ಗೆ ನನ್ನ ಅಭಿನಂದನೆಗಳು. ಆದರ ಅನೇಕ ಸಂದರ್ಭಗಳಲ್ಲಿ ಹಳೇ ಕಳಾಸಿಪಾಳ್ಯದಲ್ಲಿ ನೂರಾರು ರೂಪಾಯಿ ಬೆಲೆ ಬಾಳತಕ್ಕಂಥ ಚದರಗಜಕ್ಕೆ ೨೦೦–೨೫೦ ರೂಪಾಯಿ ಬೆಲೆ ಬಾಳುವ ಸೈಟುಗಳನ್ನು ಕೇವಲ ಚದರಗಜಕ್ಕೆ ೫೦–೬೦ರೂಪಾಯಿನಂತೆ ಕೊಟ್ಟಿರುವ ನಿದರ್ಶನಗಳು ಅನೇಕ ಇವೆ. ಈಗ ಸುಮಾರು ೫೦ ಪುಟದ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಹೇಗೆ ಹೆಚ್ಚು ಬೆಲೆ ಯಾಳ್ಳದ್ದನ್ನು ಕಡಿಮೆ ಬೆಲೆಗೆ ಕೊಡುವ ನೀತಿಯನ್ನು ತಡೆಗಡ್ಡುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್:—ಕೆಲವೊಂದು ಜಮೀನಿನ ಕೇಸ್‌ಗಳಲ್ಲಿ ಆ ರೀತಿ ಆಗಿದ್ದರೆ ಅಂತಹವುಗಳನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು —ಸ್ವಾಮಿ, ಈಗ ಸುಮಾರು ೨೯೭ ಸೈಟುಗಳನ್ನು ಮಾರಾಟ ಮಾಡಿದ್ದಾರೆ. ಸಾವಿರ ಸೈಟುಗಳನ್ನು ಲೀಸ್‌ನಲ್ಲಿ ಕೊಟ್ಟಿದ್ದಾರೆ. ಇನ್ನೂ ಕಾರ್ಪೊರೇಷನ್‌ನಲ್ಲಿ ಎಷ್ಟು ಸೈಟುಗಳನ್ನು ಮಾರಾಟ ಮಾಡಿದ್ದಾರೆ. ಎಷ್ಟು ಸೈಟುಗಳನ್ನು ಲೀಸ್‌ನಲ್ಲಿ ಕೊಟ್ಟಿದ್ದಾರೆಂಬುದನ್ನು ಹೇಳುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಈ ಬಗ್ಗೆ ಅಂಕಿ ಅಂಶಗಳು ನನ್ನಲ್ಲಿ ಇಲ್ಲ. ಇದ್ದ ಕಾರ್ಪೋರೇಷನ್ ಜಾಗವನ್ನು ಅನ್ಯಾಯವಾಗಿ, ಅತಿಕ್ರಮವಾಗಿ ತೆಗೆದುಕೊಳ್ಳುವುಂಥಾದ್ದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಟುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೆಲವು ಸಂಘಸಂಸ್ಥೆಗಳಿಗೆ ಕೊಟ್ಟಿದೆ ಎಂದು ಹೇಳಿದ್ದೀರಿ. ಇದರಲ್ಲಿ ಸಂಘಸಂಸ್ಥೆಗಳಿಗೆ ಕೊಟ್ಟಿರುವ ಪೈಕಿ ಎಷ್ಟು ರಿಜಿಸ್ಟರ್ ಆಗಿವೆ ಎಷ್ಟು ರಿಜಿಸ್ಟರ್ ಆಗಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಸಾಧಾರಣವಾಗಿ ರಿಜಿಸ್ಟರ್ ಆಗಿರುವಂಥ ಸಂಸ್ಥೆಗಳನ್ನು ವೇರಿ ಮಾಡಿ ಕೊಟ್ಟಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕಾರ್ಪೊರೇಷನ್ ಸ್ಥಳವನ್ನು ೯೦ ವರ್ಷ, ನೂರು ವರ್ಷ ಗೇಣಿಗೆ ಪಡೆದು ಅದನ್ನು ಭಾರಿ ಶ್ರೀಮಂತರುಗಳಿಗೆ ಲಕ್ಷೋಪಲಕ್ಷ ಹಣವನ್ನು ತೆಗೆದುಕೊಂಡು ಕೊಟ್ಟಿರುವುದನ್ನು ತಮ್ಮ ಅವಗಾಹನೆಗೆ ತಂದರೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ಕೆ. ನಾಯ್ಕರ್.—ಅಗತ್ಯವಾಗಿ ಸರ್ಕಾರದ ಗಮನಕ್ಕೆ ತರಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಹಳೇ ತರುಗುಪೇಟೆ ಹತ್ತಿರ ಇತತಕ್ಕಂಥ ಗಾಡಿ ನಿಲ್ಲುತಕ್ಕ ಜಾಗವನ್ನು ಕೊಡಬೇಕು ಎಂದು ತೀರ್ಮಾನ ಬಂದಿದೆ. ದಯವಿಟ್ಟು ಜನಸಾಮಾನ್ಯರಿಗೂ ಉಪಯೋಗವಾಗುವ ಹಾಗೆ ಆ ಜಾಗವನ್ನು ಅನುಕೂಲಸ್ಥರಿಗೆ ಕೊಡುವುದನ್ನು ತಡೆಗಟ್ಟುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ಹೇಳಿದಂಥ ಜಾಗವನ್ನು ನಾನು ಸ್ವತ: ಹೋಗಿ ಪರಿಶೀಲನೆ ಮಾಡಿ ಬಂದಿದ್ದೇನೆ. ಆ ಜಾಗ ನಾನಾ ರೀತಿಯಿಂದ ದುರುಪಯೋಗವಾಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಆ ಜಾಗವನ್ನು ಹಣವಂತರಿಗೆ ಕೊಡುತ್ತಾರೆಂಬ ಸಂಗತಿ ಇಲ್ಲ. ಕಾರ್ಪೊರೇಷನ್‌ಗೆ ಯಾವ ರೀತಿ ಲಾಭ ಆಗಬೇಕೋ ಆ ರೀತಿ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.